ಅದೃಶ್ಯನಾದನು. ಅದರಂತೆ ಮುಂದೆ ಧ್ರುವನು ರಾಜನಾಗಿ, ಬಹಳಕಾಲ ಆಳಿದನು. ನಂತರ ಭಗವಂತನ ಅನುಗ್ರಹದಿಂದ ಶಾಶ್ವತಪದವನ್ನು ಪಡೆದನು.

ಧ್ರುವನ ಮಗನಾದ **ಉತ್ಕಲನು** ಚಿಕ್ಕ ವಯಸ್ಸಿನಲ್ಲಿಯೇ ವೈರಾಗ್ಯಪರನಾಗಿದ್ದನು. ಹೀಗಾಗಿ ಅವನಿಗೆ ರಾಜ್ಯಭಾರದಲ್ಲಿ ಆಸಕ್ತಿ ಇರಲಿಲ್ಲ. ಅವನು ಶಾಂತಮನಸ್ಸಿನವನು. ಸದಾ ಮೌನಿಯಾಗಿರುತ್ತಿದ್ದ. ಇವನನ್ನು ಅರ್ಥಮಾಡಿಕೊಳ್ಳದ ಜನ 'ಮರುಳ'ನೆಂದೇ ಅವನನ್ನು ಭಾವಿಸಿದರು. ಅರಮನೆಯ ಮಂತ್ರಿಗಳು ಅವನನ್ನು ಸಿಂಹಾಸನದಿಂದ ಕೆಳಕ್ಕೆ ಇಳಿಸಿದರು. **ವತ್ಸರ**ನೆಂಬುವನನ್ನು ಪಟ್ಟಕ್ಕೆ ಏರಿಸಿದರು. ಅವನ ನಂತರ, ಹಲವಾರು ರಾಜರು ರಾಜ್ಯಭಾರ ಮಾಡಿದರು. ಅವರಲ್ಲಿ **ಅಂಗ**ನೆಂಬುವವನು ಕೀರ್ತಿಶಾಲಿಯಾದನು. ಅವನು ಮಕ್ಕಳಿಗಾಗಿ ಪುತ್ರಕಾಮೇಷ್ಟಿ ಯಾಗ ಮಾಡಿದನು. ಆಗ ಹುಟ್ಟಿದವನೇ **ವೇನ.**

ವೇನ ನೀಚಬುದ್ಧಿಯವನು, ನಿರ್ದಯಿ. ಜನರನ್ನು ಗೋಳಾಡಿಸುತ್ತಿದ್ದನು. ಇದನ್ನು ನೋಡಿ ರಾಜನಾದ ಅಂಗನಿಗೆ ಸಂತಾಪವಾಯಿತು. ಅವನು ವೈರಾಗ್ಯ ಹುಟ್ಟಿ ಒಂದು ದಿನ ಅರ್ಧರಾತ್ರಿಯಲ್ಲಿ ಕಾಡಿಗೆ ಹೋಗಿಬಿಟ್ಟನು. ಜನರು ವೇನನಿಗೇ ಪಟ್ಟಕಟ್ಟಿದರು. ಅವನು ಇನ್ನೂ ಅಹಂಕಾರದಿಂದ ಮೆರೆದಾಡಿದನು. ರಾಜ್ಯದಲ್ಲಿ ಅನ್ಯಾಯ, ಕಳ್ಳತನ ಹರಡಿತು. ಋಷಿಗಳೆಲ್ಲ ಸೇರಿ ಅವನ ಹತ್ತಿರ ಹೋದರು. ಬುದ್ಧಿವಾದವನ್ನು ಹೇಳಿದರು. ಆದರೆ ವೇನನು ಅವರನ್ನೇ ಗೇಲಿಮಾಡಿದನು. ಇದರಿಂದ ಋಷಿಗಳಿಗೆ ಕೋಪಬಂತು. ಅವರು ಅವನನ್ನು ಶಪಿಸಿದರು. ವೇನನು ಸತ್ತುಬಿದ್ದನು. ಆದರೆ ರಾಜ್ಯಕ್ಕೆ ರಾಜರು ಯಾರೂ ಇರಲಿಲ್ಲ. ಹೀಗಾಗಿ ವೇನನ ದೇಹದ ಎರಡು ತೋಳುಗಳನ್ನು ಕಡೆದರು. ಇದರಿಂದ ಒಂದು ಗಂಡು, ಒಂದು ಹೆಣ್ಣು ಹುಟ್ಟಿಬಂದವು. ಗಂಡಿನ ಹೆಸರು ಪೃಥು. ಹೆಣ್ಣಿನ ಹೆಸರು ಅರ್ಚಿ. ಪೃಥುವಿನ ಬಲಗೈಯಲ್ಲಿ ಚಕ್ರರೇಖೆಗಳಿದ್ದವು; ಪಾದಗಳಲ್ಲಿ ಪದ್ಮರೇಖೆಯಿತ್ತು. ಈತನು ವಿಷ್ಣುವಿನ ಅಂಶವೇ ಆಗಿದ್ದನು. ಋಷಿಗಳು ಇವನನ್ನೇ ಚಕ್ರವರ್ತಿಯನ್ನಾಗಿ ಮಾಡಿದರು.

**ಪೃಥು ಅವತಾರ:** ಪೃಥು ಚಕ್ರವರ್ತಿಯ ಪಟ್ಟಾಭಿಷೇಕದಿಂದ ಲೋಕದ ಎಲ್ಲ ಜನರೂ ಹಿರಿಹಿಗ್ಗಿದರು. ಆತನು ರಾಜನಾದ ಸಮಯದಲ್ಲಿ ಇಡೀ ಭೂಮಿಯಲ್ಲಿ ಬರದ ಸ್ಥಿತಿ ಇತ್ತು. ಭೂದೇವಿಯ ಸಲಹೆಯಂತೆ, ಪೃಥುವು ಸ್ವಾಯಂಭುವ ಮನುವನ್ನೇ ಕರುವನ್ನಾಗಿ ಮಾಡಿಕೊಂಡು, ತಾನೇ ಕರೆಯುವುದಕ್ಕೆ ಕುಳಿತುಕೊಂಡು, ತನ್ನ ಬೊಗಸೆಯೊಳಕ್ಕೆ ಸಮಸ್ತ ಸಸ್ಯಗಳನ್ನೂ ಕರೆದನು. ಆಮೇಲೆ ಇತರರೂ ತಮ್ಮ ತಮ್ಮ ಇಷ್ಟಕ್ಕೆ ಅನುಸಾರವಾಗಿ ತಮಗೆ ಬೇಕಾದ ವಸ್ತುಗಳನ್ನೂ ಕರೆದುಕೊಂಡರು. ಇದರಿಂದ ಪ್ರಜೆಗಳೆಲ್ಲ ಸಂತುಷ್ಟಗೊಂಡರು. ರಾಜ್ಯದಲ್ಲಿ ಸುಖಶಾಂತಿಗಳು ನೆಲೆಸಿದವು.

ಕಾಲಾಂತರದಲ್ಲಿ ಪೃಥುವು ೯೯ ಅಶ್ವಮೇಧ ಯಜ್ಞಗಳನ್ನು ಮಾಡಿದನು. ೧೦೦ ಅಶ್ವಮೇಧ ಯಜ್ಞಗಳನ್ನು ಮಾಡಿದವನಿಗೆ ಇಂದ್ರಪದವಿ ದೊರೆಯುತ್ತದೆ. ಇದರಿಂದ ದೇವೇಂದ್ರನು ಭಯಗೊಂಡು, ಯಾಗದ ಕುದುರೆಯನ್ನು ಕದ್ದನು. ಪೃಥುವು ಅದನ್ನು ಮತ್ತೆ ವಾಪಸ್ಸು ಬರಿಸಿಕೊಂಡನು. ಆದರೆ ಇಂದ್ರ ಇನ್ನೂ ಹಲವಾರು ರೀತಿಯಲ್ಲಿ ತೊಂದರೆ ಕೊಟ್ಟನು. ಪೃಥುವು ದೇವೇಂದ್ರನನ್ನು ಬಾಣದಿಂದ ಕೊಲ್ಲಲು ಹೊರಟನು. ಆದರೆ ಅದನ್ನು ಋಷಿಗಳು ತಡೆದರು. "ನೀನು ಮೋಕ್ಷಾಕಾಂಕ್ಷಿ. ನೀನು ನೂರನೆಯ ಯಜ್ಞವನ್ನು ಮಾಡುವ ಅಗತ್ಯವಿಲ್ಲ" ಎಂದು ಬುದ್ಧಿವಾದ ಹೇಳಿದರು. ರಾಜನು ಅವರ ಮಾತನ್ನು ವಿನಯದಿಂದ ಅನುಸರಿಸಿದನು. ರಾಜನ ಈ ನಡವಳಿಕೆಯಿಂದ ನಾರಾಯಣನು ಸುಪ್ರೀತನಾದನು. ಆತನಿಗೆ ಆತ್ಮಜ್ಞಾನವನ್ನು ಉಪದೇಶಿಸಿದನು. ಇದನ್ನು ಕೇಳಿ ತೃಪ್ತನಾದ ಪೃಥುವು ಭಕ್ತಿಯಿಂದ ನಮಸ್ಕರಿಸಿದನು. ದೇವೇಂದ್ರನೂ ತನ್ನ ತಪ್ಪಿಗೆ ನಾಚಿ, ಚಕ್ರವರ್ತಿಯ ಕಾಲಿಗೆ ಬಿದ್ದನು. ಇಬ್ಬರೂ ಪರಸ್ಪರ ಆಲಿಂಗಿಸಿಕೊಂಡರು.


ಅನಂತರ ಪೃಥುವು ಗದ್ಗದ ಸ್ವರದಿಂದ ಭಗವಂತನನ್ನು ಹೀಗೆ ಪ್ರಾರ್ಥಿಸಿಕೊಂಡನು: "ಹೇ ಮುಕುಂದ, ನಿನ್ನ ಭಕ್ತರ ಮುಖಾರವಿಂದದಿಂದ ಬರುವ ನಿನ್ನ ಕಥಾಮೃತವು ಮೋಕ್ಷಕ್ಕಿಂತಲೂ ಶ್ರೇಷ್ಠವಾದುದು. ನಿನ್ನ ದಿವ್ಯಗುಣಾಮೃತವನ್ನು ಕೇಳುವುದಕ್ಕೆ ನನಗೆ ಹತ್ತು ಸಹಸ್ರ ಕಿವಿಗಳನ್ನು ದಯಪಾಲಿಸು." ಇದನ್ನು ಕೇಳಿ ಭಗವಂತನಿಗೆ ಬಹಳ ಆನಂದವಾಯಿತು. ಅವನು ಹೀಗೆ ಹೇಳಿದನು: "ಅಯ್ಯಾ, ನಿನ್ನ ಭಕ್ತಿಯ ಮಹಿಮೆಯಿಂದ ನೀನು ಮಾಯೆಯನ್ನು ದಾಟಿರುವೆ. ನನಗೆ ತುಂಬ ಸಂತೋಷವಾಯಿತು. ನೀನು ಸಾಯುಜ್ಯ ಪದವಿಯನ್ನು ಪಡೆಯುವೆ. ಆದರೆ ನೀನು ಇನ್ನೂ ಕೆಲಕಾಲ ಇಲ್ಲಿಯೇ ಇದ್ದು ಪ್ರಜೆಗಳನ್ನು ಸಲಹುತ್ತಿರಬೇಕು." ಹೀಗೆ ಹೇಳಿ ಭಗವಂತನು ಅಂತರ್ಧಾನನಾದನು. ಪೃಥುವು ತನ್ನ ರಾಜಧಾನಿಗೆ ಹಿಂದಿರುಗಿದನು.

ಅನಂತರ ಒಮ್ಮೆ ಸನಕ ಸನಂದನ ಮುಂತಾದ ಮಹರ್ಷಿಗಳು ಪೃಥುವಿನ ಬಳಿಗೆ ಬಂದರು. ಪೃಥುವಿನ ಪ್ರಾರ್ಥನೆಯಂತೆ ಸನತ್ಕುಮಾರ ಋಷಿಗಳು ಅವನಿಗೆ ಹೀಗೆ ಉಪದೇಶ ಮಾಡಿದರು: "ಆತ್ಮನಿಗೆ ಪ್ರಕೃತಿಸಂಬಂಧವೇನೂ ಇಲ್ಲ. ಅಂಥ ಸಂಬಂಧವು ಅಜ್ಞಾನದಿಂದ ಉಂಟಾದದ್ದು. ಭಕ್ತಿ ಮತ್ತು ವೈರಾಗ್ಯಗಳ ಬಲದಿಂದ ಅಜ್ಞಾನವನ್ನು ಕಳೆದುಕೊಳ್ಳಬಹುದು. ಸಜ್ಜನರ ಸಹವಾಸದಿಂದ ಭಕ್ತಿ ಹುಟ್ಟುತ್ತದೆ. ಪರಮಾತ್ಮನಲ್ಲಿ ಭಕ್ತಿ, ಇತರ ವಸ್ತುಗಳಲ್ಲಿ ವಿರಕ್ತಿ – ಇದೇ ಮೋಕ್ಷಕ್ಕೆ ಸಾಧನಗಳು. ಭಗವಂತನಿಗೆ ನೀನು ಶರೀರವೆಂದೂ, ಒಳಗೆ ಭಗವಂತನಿರುವನೆಂದೂ ನೆರೆ ನಂಬಿ 'ಪರಬ್ರಹ್ಮನೇ ನಾನು' ಎಂದು ಭಾವಿಸು. ಮತ್ತೆ ಮತ್ತೆ ಅದನ್ನು ಪರಿಭಾವಿಸಿ ದೃಢಪಡಿಸಿಕೋ."

ಇದರಿಂದ ಪೃಥು ಮಹಾರಾಜನಿಗೆ ಸಂತೋಷವಾಯಿತು. ತನ್ನ ಸಮಸ್ತವನ್ನೂ ಆ ಋಷಿಗಳ ಪಾದಕ್ಕೆ ಅರ್ಪಿಸಿದನು. ಬಹಳ ಕಾಲ ಧರ್ಮದಿಂದ ರಾಜ್ಯಭಾರ ಮಾಡುತ್ತ ಇದ್ದು, ಕಡೆಗೆ ಪತ್ನಿಯೊಡನೆ ವನಕ್ಕೆ ತೆರಳಿದನು. ಕಠೋರವಾದ ತಪಸ್ಸನ್ನು ಕೈಗೊಂಡನು. ಕಾಲಕ್ರಮೇಣ ದೇಹತ್ಯಾಗ ಮಾಡಿದನು. ⌘

# ಶ್ರೀಮನ್ನಾರಾಯಣಾಮೃತ ಧಾರಾ

**ಪುಸ್ತಕ ಪರಿಚಯ**




ಹಿಂದೆ ಬಾಯಿಪಾಠ ಚಾಲ್ತಿಯಲ್ಲಿದ್ದ ಕಾಲದಲ್ಲಿ ಸಂಜೆಯಾದೊಡನೆ ಸ್ತೋತ್ರಗಳನ್ನು ಹೇಳಿಕೊಡುತ್ತಿದ್ದರು. ಬುದ್ಧಿವಂತ ಹುಡುಗರಿಗೆ ಅಮರಕೋಶ, ಅವರು ಕಲಿತಷ್ಟು ಭಗವದ್ಗೀತೆಯ ಅಧ್ಯಾಯಗಳನ್ನು ಕಲಿಸುತ್ತಿದ್ದರು. ಅರ್ಥ ತಿಳಿಯುವ ಮೊದಲೇ, ಲಿಪಿಯ ಪರಿಚಯವಾಗುವ ಮುನ್ನವೇ ಮಕ್ಕಳಿಗೆ ಸಾಕಷ್ಟು ಶಬ್ದಗಳ ಪರಿಚಯವಾಗಿ, ಅಭಿವ್ಯಕ್ತಿಯ ಮೇಲೆ ಹಿಡಿತ ಬರುತ್ತಿತ್ತು. ಬಾಯಿಗೆ ಬರುವ ಗೀತೆಯ ಶ್ಲೋಕಗಳ ಅರ್ಥಪರಿಚಯದಿಂದ ಜೀವನದಲ್ಲಿ ಅಳವಡಿಸಿಕೊಳ್ಳಲು ತಾತ್ತ್ವಿಕ ಹಿನ್ನೆಲೆಯೂ ಲಭ್ಯವಾಗುತ್ತಿತ್ತು. ಇದನ್ನೇ ತಾನೆ ಸಂಸ್ಕಾರವೆನ್ನುವುದು? ಹೇಗಾದರೂ ಮಾಡಿ ಈ ಸಂಸ್ಕಾರವನ್ನು ಮಕ್ಕಳಲ್ಲಿ ಹುಟ್ಟುಹಾಕಲು ಗೀತೆಯ ಶ್ಲೋಕಗಳ ಕಂಠಪಾಠ-ಗಾಯನ ಸ್ಪರ್ಧೆ, ಪ್ರಬಂಧ-ಕ್ವಿಜ್- ಭಾಷಣ ಸ್ಪರ್ಧೆಗಳನ್ನು ಅನೇಕ ಸಂಸ್ಥೆಗಳು ನಡೆಸುತ್ತಿವೆ. ಸ್ಪರ್ಧೆಗಳಲ್ಲಿ ಜಯಗಳಿಸಿದವರೂ ಅನಂತರ ಗೀತೆಯನ್ನು ಮರೆಯುವುದು ಸಾಮಾನ್ಯ. ಗೀತೆಯ ಅನುವಾದಿತ ಶ್ಲೋಕಗಳಾದರೆ, ಅದರ ಸಂದೇಶವನ್ನಾದರೂ ನೆನಪಿಟ್ಟುಕೊಳ್ಳುವುದು ಸಾಧ್ಯ.

ನವಪೀಳಿಗೆಗೆ ಭಗವದ್ಗೀತೆಯ ಸಂದೇಶವನ್ನು ತಲುಪಿಸುವ ಇಂತಹ ಪ್ರಯತ್ನಗಳಲ್ಲಿ ಶ್ರೀ ಎನ್. ಆರ್. ರಾಯರ ಈ ವಿಶಿಷ್ಟ ಪದ್ಯ ಭಾವಾನುವಾದ ನೆರವಾಗುತ್ತದೆ. ಗೀತೆಯ ಪರಿಚಯವಿರುವ ಹಿರಿಯರಿಗೆ ಇವುಗಳ ಓದು ಗೀತಾಪಾರಾಯಣದ ಇನ್ನೊಂದು ರೂಪ, ಮನನ ಮಾಡಲು ಹೊಸ ಅವಕಾಶ. ಎಳೆಯರಿಗೆ ಹೊಸಗನ್ನಡದಲ್ಲಿ ಇರುವ ಈ ಸರಳ ಕನ್ನಡ ಭಾವಾನುವಾದದ ಓದು ಭಾರತೀಯ ತಾತ್ತ್ವಿಕ ಚಿಂತನೆಯ ಪರಿಚಯ ಮಾಡಿ ಕೊಡಬಲ್ಲುದು. ಗೀತೆ ಯಾರಿಗಾಗಿ?

**ಶ್ರೀಮನ್ನಾರಾಯಣಾಮೃತ ಧಾರಾ**

(ಶ್ರೀಮದ್ಭಗವದ್ಗೀತೆಯ ಸಂಸ್ಕೃತ ಶ್ಲೋಕಗಳ
ಸರಳ ಕನ್ನಡ ಭಾವಾನುವಾದ)

**ಅನುವಾದಕರು :** ಎನ್. ಆರ್. ರಾವ್

**ಪ್ರಕಾಶಕರು:** ನಾರಾಯಣಾಮೃತ ಫೌಂಡೇಷನ್,
ಸಾಧನಾ, ೧೫೮೮, ೮೦ ಅಡಿ ರಸ್ತೆ, ಹೆಬ್ಬಾಳ್ ಎರಡನೆ
ಹಂತ, ಸಂಗಮ ವೃತ್ತದ ಬಳಿ, ಮೈಸೂರು – ೫೭೦ ೦೧೭

**ಪುಟಗಳು :** VII + ೨೦೦ ; **ಬೆಲೆ:** ೧೫೦/-

**ಸೂರ್ಯನಿಗೆ ತಿಳಿಸಿದೆನು ನಿತ್ಯಸತ್ಯದೀ ಜ್ಞಾನದ ಆರಾಧನೆಯನು ಬಹು ಹಿಂದೆ ನಾನು**
**ಸೂರ್ಯ ಮನುವಿಗೆ, ಮನುವು ಇಕ್ಷ್ವಾಕುವಿಗೆ ತಿಳಿಸಿದನು ಆ ಜ್ಞಾನವನು ತಾನು ॥ (೪:೧)**

ಎಲ್ಲ ಜೀವಿಗಳ ಜೀವನಯಾತ್ರೆಯ ಜವಾಬ್ದಾರಿ ಸೂರ್ಯನದು. ಮನು ಮಾನವರ ಸೃಷ್ಟಿಕರ್ತ. ಎಲ್ಲ ರಾಜರ್ಷಿಗಳೂ ಅರಿತಿದ್ದ ಈ ಸನಾತನ ಜ್ಞಾನ ದುರ್ಬಲರ ಕೈಸೇರಿ ಕಾಲಾನುಗತಿಯಿಂದ ನಷ್ಟವಾಯಿತು. ಆದರೇನು? **ಇದಕ್ಕಾಗಿಯೇ ಯುಗಯುಗಗಳಲು ಅವತರಿಸಿ ಬರುತಿಹೆನು ನಾನು... ಯಾರು ಹೇಗೆ ಶರಣೆಂಬರೋ ಹಾಗೆ ಭಾವಕ್ಕೆ ತಕ್ಕಂತೆ ಅನುಗ್ರಹಿಸುವೆನು ನಾನು। ಎಲ್ಲ ಮಾನವರು ಅನುಸರಿಸುವರು ನನ್ನ ರೀತಿಯನೆ ಅರಿತುಕೊ ಪಾರ್ಥ ನೀನು ॥ ಆಸೆ ಕೋಪ ಭಯಗಳನು ಬಿಟ್ಟವರು ಈ ಜ್ಞಾನ ತಪಗಳಿಂದಾಗಿ ಸಾಯುಜ್ಯ ಹೊಂದುವರು.**

ಗೀತೆಯ ಧ್ಯಾನಶ್ಲೋಕಗಳನ್ನು ಬಿಟ್ಟು, ಬದಲಿಗೆ ವ್ಯಾಸರ ಬಗ್ಗೆ ಕರ್ತೃನಮನವನ್ನು ಹಾಗೂ ಕುರುಕ್ಷೇತ್ರ ಯುದ್ಧದ ಭೂಮಿಕೆಯನ್ನು ಕೊಟ್ಟಿದ್ದಾರೆ. ಮುನ್ನುಡಿಯ ರೂಪದಲ್ಲಿ ನನ್ನುಡಿಯನ್ನು ನೀಡಿದ್ದಾರೆ. ಇವೆಲ್ಲವೂ ಭಾವಾವಿಷ್ಟ ಗ-ಪದ್ಯದ ರೂಪದಲ್ಲಿ ಇವೆ. ಇದನ್ನು ಭಾವ-ಭಾಷಾಂತರ ಎಂದು ಕರೆದು, ಅರ್ಥಗಳ ಗೋಜಲನ್ನೂ, ಭಾವಾಂತರದಲ್ಲಿ ಸೋಲಾದಾಗ ಅದಮಾರು ಮಠದ ಶ್ರೀಗಳು ತಮ್ಮನ್ನು ಹುರುದುಂಬಿಸಿ ಪ್ರೋತ್ಸಾಹಿಸಿದ್ದನ್ನೂ ಆ ನನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.

೧-೨೨, ೧-೨೯, ೧-೩೦ ರಂತಹ ಕೆಲವು ಶ್ಲೋಕಗಳು ಸಂಗ್ರಹವಾಗಿ ಬಂದಿದ್ದರೂ, ಬಹಳ ಶ್ಲೋಕಗಳು ಮೂಲಕ್ಕಿಂತ ಸಾಕಷ್ಟು ಉದ್ದವಾಗಿವೆ. ಅರ್ಥ ಸಂದಿಗ್ಧತೆ ಇರಬಾರದೆಂಬುದು ಅನುವಾದಕರ ಇಚ್ಛೆಯಾಗಿರುವಂತೆ ಕಾಣುತ್ತದೆ. ಆದರೆ, ಸೂತ್ರಪ್ರಾಯದ ಅನೇಕ ಗೀತಾಶ್ಲೋಕಗಳು, ಶ್ಲೋಕಾರ್ಥಗಳು ತಟ್ಟನೆ ನೆನಪಿಗೆ ಬಂದು, ಮನಸ್ಸಿನಲ್ಲಿಯೆ ಪರಿಭಾವಿಸಿದಾಗ ಅರ್ಥವಿಸ್ತಾರ ಪಡೆಯುವುದು ಎಲ್ಲರ ಅನುಭವ. ಕಾವ್ಯದ ಭಾಷೆ ಸಂಗ್ರಹಗುಣ ಹೊಂದಿದ್ದರೆ ಚೆನ್ನು – 'ಕವನ ನೆನಪಿಗೆ ಸುಲಭ.' ಒಂದು ಶ್ಲೋಕದ ಅನುವಾದ ಗಮನಿಸಿ: